**ದಿ:17.12.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಂ.ಆರ್.ಜೆ ವಕೀಲರಿಂದ ಃ**

ನಾನು ಅಯ್ಯುಟೀರಾ ಕುಟುಂಬಕ್ಕೆ ಸೇರಿದವನು. ವಾದಿಗಳು ಮತ್ತು ಇತರ ಪ್ರತಿವಾದಿಗಳು ಸಹ ಅಯ್ಯುಟೀರಾ ಕುಟುಂಬಕ್ಕೆ ಸೇರಿದವರು ಎಂದರೆ ಸರಿ. ಅಯ್ಯುಟೀರಾ ಕುಟುಂಬಕ್ಕೆ ಸೇರಿದ ಆಸ್ತಿಗಳು ಮರಂದೋಡಾ ಗ್ರಾಮದಲ್ಲಿ ಇದೆ. ನಾನು ಹಾಸನ ಜಿಲ್ಲೆ, ಅರಕಲಗೂಡು ತಾಲೂಕು ಕಂಟೇನಹಳ್ಳಿ ಗ್ರಾಮದಲ್ಲಿ ವಾಸವಿದ್ದೇನೆ. ನಾನು ಮರಂದೋಡಾ ಗ್ರಾಮವನ್ನು ಬಿಟ್ಟು ಸುಮಾರು 60 ವರ್ಷ ಆಗಿದೆ. ಮರಂದೋಡಾ ಗ್ರಾಮದಲ್ಲಿ ಇರುವ ಆಸ್ತಿಗಳ ಸರ್ವೆ ನಂಬರ್ ಗೊತ್ತಾ ಎಂದರೆ ಸಾಕ್ಷಿ ಸರ್ವೆ ನಂ.16 ರ 7.80 ಎಕರೆ ಮಾತ್ರ ಗೊತ್ತು ಎನ್ನುತ್ತಾರೆ. ಸದರಿ ಗ್ರಾಮದಲ್ಲಿ ನಮ್ಮ ಕುಟುಂಬಕ್ಕೆ ಬೇರೆ ಯಾವ ಆಸ್ತಿ ಇದೆ ಎಂದು ನನಗೆ ಗೊತ್ತಿಲ್ಲ. ನಾನು ಮರಂದೋಡಾ ಗ್ರಾಮದಿಂದ ವಲಸೆ ಬಂದ ನಂತರ ಸದರಿ ಗ್ರಾಮಕ್ಕೆ ಹೋಗಿ ಕೃಷಿ ಮಾಡುತ್ತಿಲ್ಲ. ದಾವಾ ಸ್ವತ್ತುಗಳು ಯಾರ್ಯಾರ ಸ್ವಾಧೀನದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ನಾನು ವ್ಯವಸಾಯ ಕೆಲಸ ಮಾಡುತ್ತಿದ್ದೇನೆ. ನಾನು ವಾಸ ಮಾಡುವ ಜಾಗದಲ್ಲಿ ನನಗೆ 3 ಎಕರೆ ಆಸ್ತಿ ಇದೆ. ಸದರಿ ಆಸ್ತಿ ನನಗೆ ನನ್ನ ತಂದೆಯಿಂದ ಬಂದಿದೆ. ಸದರಿ ಆಸ್ತಿ ನನ್ನ ತಂದೆಗೆ ಮಂಜೂರಾಗಿತ್ತು. ನನ್ನ ತಂದೆ ಸಹ ಮರಂದೋಡಾ ಗ್ರಾಮದಲ್ಲಿ ವಾಸವಿರಲಿಲ್ಲ. ಸಾಕ್ಷಿ ಮುಂದುವರೆದು ನನ್ನ ಅಜ್ಜ ಮಾತ್ರ ಸದರಿ ಗ್ರಾಮದಲ್ಲಿ ವಾಸವಿದ್ದರು ಎನ್ನುತ್ತಾರೆ. ನನ್ನ ಅಜ್ಜ ಮರಂದೋಡಾ

ಗ್ರಾಮವನ್ನು ತೋರೆದ ಕಾಲಕ್ಕೆ ಅಲ್ಲಿದ್ದ ಆಸ್ತಿಗಳನ್ನು ತನ್ನ ಇತರ ಕುಟುಂಬದ ಸದಸ್ಯರಿಗೆ ಬಿಟ್ಟು ಬಂದಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಅಜ್ಜ ಕೊಡಗಿಗೆ ವಾಸಕ್ಕೆ ಬಂದಿದ್ದರು ಎನ್ನುತ್ತಾರೆ. ಮರಂದೋಡಾ ಗ್ರಾಮದಿಂದ ನನ್ನ ಅಜ್ಜ ಬರುವ ಕಾಲಕ್ಕೆ ತನಗೆ ಬರಬೇಕಾದ ಪ್ರತಿಫಲವನ್ನು ಪಡೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. 11 ರಿಂದ 29 ನೇ ಪ್ರತಿವಾದಿಗಳಿಗೆ ದಾವಾ ಸ್ವತ್ತುಗಳೆಲ್ಲಾ ಹಿಸ್ಸಾ ಹಕ್ಕು ಇದೆ ಎಂದರೆ ಸಾಕ್ಷಿ ಸರ್ವೆ ನಂ.16 ರ ಆಸ್ತಿಯಲ್ಲಿ ಹಿಸ್ಸಾ ಹಕ್ಕು ಇಲ್ಲ ಇತರ ದಾವಾ ಸ್ವತ್ತುಗಳಲ್ಲಿ ಇದೆ ಎನ್ನುತ್ತಾರೆ. ನನ್ನ ಕುಟುಂಬಕ್ಕೆ ಸಂಬಂಧಿಸಿದ ವಂಶ ವೃಕ್ಷವನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಲು ನನಗೇನೂ ತೊಂದರೆ ಇಲ್ಲ. ಮರಂದೋಡಾ ಗ್ರಾಮದಲ್ಲಿ ಇರುವ ನಿಮ್ಮ ಕುಟುಂಬದ ಆಸ್ತಿಗಳಿಗೆ ಮೂಲ ಪುರುಷ ಯಾರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅಯ್ಯಟೀರಾ ಕುಟುಂಬದಲ್ಲಿ 7-8 ಶಾಖೆಗಳು ಇವೆ. ನ್ಯಾಯಾಲಯದ ವಂಶ ವೃಕ್ಷವನ್ನು ಹಾಜರು ಮಾಡಿದರೆ 7-8 ಶಾಖೆಗಳು ಮತ್ತು ಪ್ರತಿಯೊಂದು ಸದಸ್ಯರ ಸಂಬಂಧಗಳು ಕಂಡು ಬರುತ್ತದೆ ಎಂದರೆ ಸರಿ. ಸಾಕ್ಷಿಗೆ ನಿಪಿ.4 ನ್ನು ತೋರಿಸಿ ಅದರಲ್ಲಿ ಕಾಣಿಸಿರುವಂತೆ ಸರ್ವೆ ನಂ.21/ಎ5 ರ ಆಸ್ತಿ 15ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇದೆ ಎಂದರೆ ಸರಿ. 15ನೇ ಪ್ರತಿವಾದಿ ನಿಪಿ.4 ರ ಆಸ್ತಿ ಅಲ್ಲದೆ 1ನೇ ವಾದಿಯ ಗಂಡನಿಂದ ಆಸ್ತಿ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಮರಂದೋಡಾ ಗ್ರಾಮವನ್ನು ತ್ಯಜಿಸಿರುವುದರಿಂದ ಕ್ರಯಪತ್ರದ

ವಿಚಾರ ನನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ನಾನು ಸದರಿ ಗ್ರಾಮಕ್ಕೆ ಆಗಾಗ ಹೋಗುತ್ತಿರುತ್ತೇನೆ ಆದರೆ ಕ್ರಯಪತ್ರದ ವಿಚಾರ ಗೊತ್ತಿಲ್ಲ ಎನ್ನುತ್ತಾರೆ. ನಿಪಿ.1 ಮತ್ತು 2 ರಲ್ಲಿ ಕಾಣಿಸಿರುವ ಎಲ್ಲಾ ಖಾತಾದಾರರಿಗೂ ಸದರಿ ಆಸ್ತಿಯ ಮೇಲೆ ಹಕ್ಕು ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ.1 ಮತ್ತು 2 ರಲ್ಲಿ ನನ್ನ ಹೆಸರು ಇಲ್ಲ. ಸದರಿ ದಾಖಲೆಗಳಲ್ಲಿ 1, 3 ರಿಂದ 10ನೇ ಪ್ರತಿವಾದಿಗಳ ಹೆಸರು ಸಹ ಇಲ್ಲ ಎಂದರೆ ಸರಿ. ನಾನು ಕಂದಾಯ ಅಧಿಕಾರಿಗಳ ಮುಂದೆ ನಿಪಿ.1 ಮತ್ತು 2 ರ ಆರ್.ಟಿ.ಸಿ ಗಳಲ್ಲಿ ನನ್ನ ಹೆಸರನ್ನು ಸಹ ಸೇರಿಸುವಂತೆ ಕೇಳಿಲ್ಲ. 3ನೇ ಪ್ರತಿವಾದಿ ಪಾರ್ವತಿ ನಿಮಗೆ ಏನಾಗಬೇಕು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅದೇ ರೀತಿ 4ನೇ ಪ್ರತಿವಾದಿ ಭಾರತಿ ಯಾರೆಂದು ಗೊತ್ತಿಲ್ಲ. 5ನೇ ಪ್ರತಿವಾದಿ ಎ.ವಿ.ಕುಮಾರ ಈತ ವಾಸು ಇವರ ಮಗ. 6ನೇ ಪ್ರತಿವಾದಿ ಎ.ವಿ.ಸತೀಷ್ ಈತ ಚಾಮಿ ಇವರ ಮಗ. ವಾಸು ಮತ್ತು ಚಾಮಿ ಇವರು ನನ್ನ ದಾಯಾದಿಗಳು. 7ನೇ ಪ್ರತಿವಾದಿ ಎ.ಕೆ.ಪೂವಯ್ಯ ಆಲಿಯಾಸ್ ಮಣಿ ಈತ ಗೊತ್ತು. ಸದರಿಯವರು ನನ್ನ ದಾಯಾದಿ. 8 ರಿಂದ 10 ನೇ ಪ್ರತಿವಾದಿಗಳು ನನ್ನ ಅಣ್ಣನ ಮಕ್ಕಳು. 11 ರಿಂದ 15 ನೇ ಪ್ರತಿವಾದಿಗಳು ಚಿಕ್ಕಪ್ಪ-ದೊಡ್ಡಪ್ಪನ ಮಕ್ಕಳು. 11 ರಿಂದ 15 ನೇ ಪ್ರತಿವಾದಿಗಳು ಮರಂದೋಡಾ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ. ಮರಂದೋಡಾ ಗ್ರಾಮದಲ್ಲಿ ಇರುವ ಆಸ್ತಿಗಳನ್ನು ವ್ಯವಸಾಯ ಮಾಡಿಕೊಂಡು ಸದರಿಯವರು ಜೀವನ ನಡೆಸುತ್ತಿದ್ದಾರೆ ಎಂದರೆ ಸರಿ. 16 ರಿಂದ 18 ನೇ

ಪ್ರತಿವಾದಿಗಳು ಗೊತ್ತಾ ಎಂದರೆ ಸಾಕ್ಷಿ ಆ ವ್ಯಕ್ತಿಗಳು ಗೊತ್ತು ಆದರೆ ಹೆಸರುಗಳು ಗೊತ್ತಾಗುವುದಿಲ್ಲ ಎನ್ನುತ್ತಾರೆ. ಸದರಿಯವರು ಎಲ್ಲಿ ವಾಸವಿದ್ದಾರೆ ಎಂದು ನನಗೆ ಗೊತ್ತಿಲ್ಲ. 16 ರಿಂದ 18 ನೇ ಪ್ರತಿವಾದಿಗಳು ಸಹ ನನ್ನ ಚಿಕ್ಕಪ್ಪ-ದೊಡ್ಡಪ್ಪನ ಮಕ್ಕಳು ಎನ್ನುತ್ತಾರೆ. ಅದೇ ರೀತಿ 19 ರಿಂದ 28ನೇ ಪ್ರತಿವಾದಿಗಳು ಸಹ ನನ್ನ ಚಿಕ್ಕಪ್ಪ-ದೊಡ್ಡಪ್ಪನ ಮಕ್ಕಳು ಎನ್ನುತ್ತಾರೆ. 29 ನೇ ಪ್ರತಿವಾದಿ ಎಂ.ಎಸ್.ಚಿಣ್ಣಪ್ಪ ಇವರು ನನಗೆ ಗೊತ್ತಿಲ್ಲ. ಇತರ ಪ್ರತಿವಾದಿಗಳ ಸಂಬಂಧವನ್ನು ಹೇಳಿದರೆ ಮಾತ್ರ ಯಾರ್ಯಾರಿಗೆ ಎಷ್ಟೇಷ್ಟು ಭಾಗಾಂಶ ಇದೆ ಎಂದು ಹೇಳಬಹುದು ಎಂದರೆ ಸರಿ.

2. ಜಯಕುಮಾರ ಇವರಿಗೆ ಇಬ್ಬರು ಹೆಂಡತಿಯರು. ಜಯಕುಮಾರ ಇವರ ತಂದೆಗೆ 3 ಜನ ಮಕ್ಕಳು. ಸಾಕ್ಷಿ ಮುಂದುವರೆದು 2 ಹೆಣ್ಣು ಮಕ್ಕಳು ಮತ್ತು ಜಯಕುಮಾರ ಅವರ ತಂದೆ-ತಾಯಿಗೆ ಮಕ್ಕಳು ಎನ್ನುತ್ತಾರೆ. ಜಯಕುಮಾರ ಹಾಲಿ ಜೀವಂತ ಇಲ್ಲ. ಜಯಕುಮಾರ ಈತನ ಸಹೋದರಿಯರು ಜೀವಂತ ಇದ್ದಾರೆ. ಜಯಕುಮಾರ ಈತನ ಸಹೋದರಿಯರು ತಮಿಳುನಾಡಿನಲ್ಲಿ ವಾಸವಿದ್ದಾರೆ. ಜಯಕುಮಾರ ಇವರ ಮೊದಲನೇ ಹೆಂಡತಿ ಮುಖಾಂತರ ಮಕ್ಕಳು ಇದ್ದಾರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಜಯಕುಮಾರ ಈತನ ತಂದೆ ಬೆಳ್ಳಿಯಪ್ಪ ಇವರು ಮರಂದೋಡ ಗ್ರಾಮದಲ್ಲಿ ತನ್ನ ಹಿಸ್ಸೆಗೆ ಬಂದಿದ್ದ ಆಸ್ತಿಗಳನ್ನು ಮಾರಾಟ ಮಾಡಿ ಬಂದು ಒಳಗುಂದ ಗ್ರಾಮಕ್ಕೆ ವಲಸೆ ಬಂದಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಒಳಗುಂದ ಆಸ್ತಿಯನ್ನು ಜಯಕುಮಾರ, 1 ರಿಂದ 3

ನೇ ವಾದಿಗಳು ಸೇರಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ವಾದಿಗಳಿಗೆ ಒಳಗುಂದ ಗ್ರಾಮದಲ್ಲಿ ಇದ್ದ ಆಸ್ತಿಗಳನ್ನು ಮಾರಾಟ ಮಾಡಿರುವುದರಿಂದ ದಾವಾ ಸ್ವತ್ತುಗಳ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅಯ್ಯಟೀರಾ ಕುಟುಂಬದ ಇತರ ಸದಸ್ಯರನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡದೆ ಇದಿದ್ದರಿಂದ ಈ ದಾವೆ ಊರ್ಜಿತ ಅಲ್ಲ ಎಂದರೆ ಸರಿ. ಅಯ್ಯಟೀರ ಕುಟುಂಬಕ್ಕೆ ಸೇರಿದ ಇತರ ಸದಸ್ಯರು ಸಹ ಇದ್ದಾರೆ ಎಂದರೆ ಸರಿ. ಆ ವಿಚಾರಗಳನ್ನು ಮರೆ ಮಾಚಿ ನಾನು ಎದುರು ಕ್ಲೇಮನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಅಯ್ಯಟೀರಾ ಕುಟುಂಬದ ಎಲ್ಲಾ ಸದಸ್ಯರು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಸುಳ್ಳು ಅಂಶಗಳನ್ನು ಪ್ರತಿಪಾಧನೆ ಮಾಡಿ ನಾನು ನ್ಯಾಯಾಲಯದ ಮುಂದೆ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ದಾವಾ ಸ್ವತ್ತುಗಳಲ್ಲಿ ಪಾಲು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.